


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD Rotary

Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –39 ದಿನಾಂಕ : 08–04–2026


**ಸುಮಾರು 210 ವರ್ಷಗಳ ಹಿಂದೆ ಬದುಕಿ, ಬಾಳಿ, ಜೀವನದ ಅರ್ಥಕ್ಕೊಂದು ದಾರಿ ತೋರಿದ ದಾರ್ಶನಿಕರಲ್ಲಿ ಒಬ್ಬರಾಗಿದ್ದ ಉತ್ತರ ಕರ್ನಾಟಕದ ಕುಂದಗೋಳದ ನಿವಾಸಿಯಾಗಿದ್ದ, ಶ್ರೀ ಗೋವಿಂದ ಭಟ್ಟರ ಪ್ರಿಯ ಶಿಷ್ಯನಾಗಿದ್ದ ಸಂತ ಶಿಶುನಾಳ ಷರೀಫರ ಸಾಹಿತ್ಯಗಳು ಇಂದಿಗೂ ಪ್ರಸ್ತುತವೇ ಎಂಬ ವಿಚಾರವಾಗಿ, ಜ್ಞಾನದೀಪ ಶಾಲೆಯ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಮಲ್ಲಿಕಾರ್ಜುನ ತುರುವನೂರು ಇವರಿಂದ ಷರೀಫರ ರಚನೆಗಳ ಪ್ರಸ್ತುತಿ ಹಾಗೂ ಗಾಯನದೊಂದಿಗಿನ ಉಪನ್ಯಾಸ ದಿನಾಂಕ: 08.04.2026 ರಂದು ರೋಟರಿ ಯುವ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು.**

**ಅಂದು ನಡೆದ ವಾರದ ಸಭೆಯಲ್ಲಿ ಪಾಲ್ಗೊಂಡಿದ್ದ ನಮ್ಮ ರೋಟರಿಯ ಸದಸ್ಯರಿಗೆ ಮುಖ್ಯ ಅತಿಥಿಗಳ ಮಾತು ಮುದ ನೀಡಿತು ಮತ್ತು ಚಿಂತನೆಗೆ ಹಚ್ಚುವಂತದ್ದಾಗಿತ್ತು. ವೇದಿಕೆಯಲ್ಲಿ ಉಪನ್ಯಾಸಕರಾದ ಶ್ರೀ ಮಲ್ಲಿಕಾರ್ಜುನ ತುರುವನೂರು, ನಮ್ಮ ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ.ಆರ್.ಆನಂದರವರು, ಕಾರ್ಯದರ್ಶಿಯವರಾದ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದರು. ಸಾರ್ಜೆಂಟ್ ರೊ. ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಸಭೆ ಪ್ರಾರಂಭವಾಯಿತು.**










ರೊ.ಎನ್.ವಿ.ಭಟ್‌ರವರಿಂದ ಸಂತ ಶಿಶುನಾಳ ಷರೀಫ್‌ರ ಗೀತೆ– "ಮರುಳೇ ಮರೆತಿರಬೇಡ ಮಾತು ಶಿವ ಭಜನವ" ಎಂಬ ಹಾಡಿನ ಗೀತೆ ಗಾಯನದ ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಯಿತು. ರೊ. ಹೆಚ್.ಎಸ್. ರಘುರಾಮ ಭಟ್‌ರವರು ಸರ್ವರನ್ನು ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಏಪ್ರಿಲ್ 1 ರಂದು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ರೊ.ಅನುರಾಧ ಶೀರನಾಳಿಯವರನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಿ ಶುಭ ಹಾರೈಸಲಾಯಿತು. ಇತ್ತೀಚೆಗೆ ರೋಟರಿ ಸೆಂಟಿನರಿ ಟ್ರಸ್ಟಿನ ನೂತನ ಪದಾಧಿಕಾರಿ ಮಂಡಳಿ ರಚನೆಗೊಂಡಿದ್ದು ಈ ಕೆಳಕಂಡವರನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು. ರೊ.ಎನ್.ವಿ.ಭಟ್, ಮ್ಯಾನೇಜಿಂಗ್ ಟ್ರಸ್ಟಿಯಾಗಿ ಆಯ್ಕೆಯಾಗಿದ್ದು, ಕಾರ್ಯದರ್ಶಿಯಾಗಿ ರೊ. ಸೆಂಥಿಲ್ ವೇಲನ್ ಮತ್ತು ಖಜಾಂಚಿಯಾಗಿ ರೊ.ಎಸ್. ಮಂಜುನಾಥರವರು ಆಯ್ಕೆಯಾಗಿದ್ದಾರೆ.

ಮುಖ್ಯ ಅತಿಥಿಗಳಾದ ಶ್ರೀ ಮಲ್ಲಿಕಾರ್ಜುನ ತುರುವನೂರು ಇವರನ್ನು ರೊ.ಪಿಎಜಿ. ಸುನೀತಾ ಶ್ರೀಧರ್‌ರವರು ಸಭೆಗೆ ಪರಿಚಯ ಮಾಡಿದರು. ಶ್ರೀಯುತರು ಕನ್ನಡದ ವಿಷಯದಲ್ಲಿ ಎಂ.ಎ.ಪದವಿಯಲ್ಲಿ ರ್‍ಯಾಂಕ್ ಪಡೆದಿರುತ್ತಾರೆ. ಇವರು ಪ್ರತಿಭಾವಂತ ಬರಹಗಾರರು, ಅತ್ಯುತ್ತಮ ಅನುವಾದಕರು, ಕನ್ನಡ ಸಾಹಿತ್ಯ ಮತ್ತು ವಿಜ್ಞಾನ ಲೋಕವನ್ನು ಬೆಸೆಯುವುದರಲ್ಲಿ ಪ್ರಮುಖ ಪಾತ್ರಧಾರಿಗಳು. ಕನ್ನಡ ಸಾಹಿತ್ಯ ಲೋಕದ

## ಈ ವಾರದ ಸಭೆ

**ದಿನಾಂಕ: 15–04–2026, ಬುಧವಾರ ಸಂಜೆ 6:45 ರಿಂದ**

### ನಮ್ಮ ಕ್ಲಬ್‌ನ ಚಾರ್ಟರ್ ಡೇ ಆಚರಣೆ ಹಾಗೂ ಮಾಜಿ ಅಧ್ಯಕ್ಷರುಗಳಿಗೆ ಅಭಿನಂದನೆ

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ













ಸೃಜನಶೀಲ ಚಿಂತಕರು, ಶಬ್ದಗಳ ಆಳ ಅಗಲವನ್ನು ಅರಿತ ವಿದ್ವಾಂಸರು ಹಾಗೂ ನವಿರಾದ ಬರಹದ ಮೂಲಕ ಸಹೃದಯರ ಮನಗೆದ್ದಿರುವ ಅಕ್ಷರ ಲೋಕದ ಆರಾಧಕರು, ಅವರ ಸಂಶೋಧಾನಾತ್ಮಕ ಬರಹಗಳು ಕನ್ನಡ ಸಾಹಿತ್ಯ ಚರಿತ್ರೆಗೆ ಮಹತ್ವದ ಕೊಡುಗೆ ನೀಡಿದೆ. ಇವರು ರಚಿಸಿದ "ಸಾವಿನಾಚೆಯ ಸತ್ಯ" ಎಂಬ ಕಥೆ ಕುವೆಂಪು ಹಾಗೂ ದಾವಣಗೆರೆ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಕ್ಕೆ ಆಯ್ಕೆಯಾಗಿರುತ್ತದೆ. ಜೀವನ ತಂತ್ರಜ್ಞಾನ ಎಂಬ ಬರಹವೂ ವಿಶ್ವವಿದ್ಯಾಲಯದ ಪಠ್ಯವಾಗಿದೆ. ಇವರು ವಿಷಯಗಳನ್ನು ಸರಳವಾಗಿ ಮತ್ತು ನೇರವಾಗಿ ಪ್ರಸ್ತುತ ಪಡಿಸುವ ಶೈಲಿ ಗಮನಾರ್ಹವಾಗಿದೆ. ಸಾಹಿತ್ಯ ಸಂಶೋಧಕ, ಆಚಾರಗಳ ಸಂಗಮದಂತಿರುವ ಇವರು ಕನ್ನಡದ ಅಸ್ಮಿತೆಯ ಪ್ರತೀಕವಾಗಿದ್ದಾರೆ. ಇವರ ಕೃತಿಗಳು ಸಂಪಾದಿಸಿದ ಬರಹಗಳು ಇವರು ಹಲವಾರು ಧ್ವನಿಸುರಳಿಗಳು ಲಭ್ಯವಿದೆ. ಹಲವಾರು ಅಭಿನಂದನಾ ಗ್ರಂಥಗಳಲ್ಲಿ ಇವರ ಬರಹಗಳು ದಾಖಲಾಗಿವೆ. ಕಳೆದ 20 ವರ್ಷಗಳಿಂದ ಜ್ಞಾನದೀಪ ಸೀನಿಯರ್ ಸೆಕೆಂಡರಿ ಶಾಲೆಯಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪತ್ನಿ ಶ್ರೀಮತಿ ದೀಪಾ ಕುಬುಸದ್‌ರವರು ಶಿಕ್ಷಕಿಯಾಗಿದ್ದಾರೆ. ಮಕ್ಕಳಾದ ಆಕಾಂಕ್ಷೆ ಮತ್ತು ಆತ್ಮೀಯರವರುಗಳು ಇವರ ಸಾಹಿತ್ಯದ ಕೆಲಸಗಳಿಗೆ ನೆರವಾಗುತ್ತಿದ್ದಾರೆ.

ಅಂದಿನ ಮುಖ್ಯ ಅತಿಥಿಗಳಾದ ಶ್ರೀ ಮಲ್ಲಿಕಾರ್ಜುನ ತುರುವನೂರುರವರು ಮಾತನಾಡುತ್ತಾ, ಇಲ್ಲಿ ಹಿರಿಯರು, ಅನುಭವಿಗಳು, ಚಿಂತಕರು ಬಹಳಷ್ಟು ಜನ ಇದ್ದೀರಿ. ಜೀವನದ ಮೌಲ್ಯಗಳ ಪ್ರಸ್ತುತತೆಯನ್ನು ನೋಡಿದವರಿದ್ದೀರಿ. ಈಗ ನಾವು ಯುದ್ಧದ ಸನ್ನಿವೇಶ, ವಿಚಿತ್ರ ಸನ್ನಿವೇಶಗಳನ್ನು ನೋಡುತ್ತಿದ್ದೇವೆ. ಸುಮಾರು 210 ವರ್ಷಗಳ ಹಿಂದೆ ಆಗಿ ಹೋದ ಸಂತನ ಚಿಂತನೆ, ಕಾವ್ಯ, ಹಾಡುಗಳು ಸಮಾಜಕ್ಕೆ ಏನು ಸಂದೇಶ ಕೊಡುತ್ತಿದೆ ಎನ್ನುವುದನ್ನು ತಿಳಿದುಕೊಂಡು ಕೊನೆತನಕ ಉಳಿಸಿ ನಮ್ಮ ಜೀವನವನ್ನು ಸಾರ್ಥಕ್ಯಗೊಳಿಸಿಕೊಳ್ಳಬೇಕು. ಅದು ಸಮಾಜದ ಓರೆಕೋರೆಗಳನ್ನು ತಿದ್ದುವಂತಾಗಬೇಕು ಎನ್ನುತ್ತಾ ಕವಿ ದ.ರಾ.ಬೇಂದ್ರೆಯವರ ಆಪ್ತ ಸ್ನೇಹಿತ ಮಧುರ ಚೆನ್ನರವರು ನಿಧನರಾದಾಗ ಅವರ ದೇಹದ ಸಂಸ್ಕಾರಕ್ಕೆ ಹೋದಾಗ ಒಂದೆಡೆ ಕುಳಿತಿದ್ದರಂತೆ. ಆಗ ಸಂಸ್ಕಾರಕ್ಕೆ ಹೋದವರು ಶ್ರೀ ಮಧುರಚೆನ್ನರವರ ದೇಹವನ್ನು ಹೂತಿದ್ದೇವೆ ಎಂದಾಗ, ಹೂತಿದ್ದೇವೆ ಎನ್ನಬೇಡಿ ಬಿತ್ತಿದ್ದೇವೆ ಎಂದು ಹೇಳಿರೋ ಎಂಬ ಮಾರ್ಮಿಕವಾದ ಆಡಿದ ಮಾತನ್ನು ತಿಳಿಸಿ, ಸಮಾಜಕ್ಕೆ ಚಿಂತನೆಗಳನ್ನು ಬಿತ್ತಿದ ದಾರ್ಶನಿಕರಿವರುಗಳು ಎಂದರು.

ಸಂತ ಶಿಶುನಾಳ ಷರೀಫರ ಬಾಲ್ಯದ ಬಗ್ಗೆ ಮಾತನಾಡುತ್ತಾ, ಒಂದೊಮ್ಮೆ ಅವರು ಗುರುಗಳಾದ ಶ್ರೀ ಗೋವಿಂದ ಭಟ್ಟರು ಷರೀಫರನ್ನು ಮೊದಲ ಬಾರಿ ಭೇಟಿಯಾದಾಗ ನಿಮ್ಮ ಅಪ್ಪ ಯಾರು ?ಎಂದಾಗ ನಿಮ್ಮಪ್ಪನೇ ನಮ್ಮಪ್ಪ ಎಂದಿದ್ದನ್ನು ಕೇಳಿ, ಅವರಪ್ಪನಿಗೆ ನೆಲ ಫಲವತ್ತದ, ಬೀಜ ಬಿತ್ತಿದರೆ ಫಲ ಬರತ್ತದೆ. ಇವನನ್ನ ನನ್ನ ಉಡಿಗೆ ಹಾಕು ಎಂದರಂತೆ. ಇವತ್ತಿನ ಮಕ್ಕಳಿಗೆ ಪ್ರಸ್ತುತತೆ ಇಲ್ಲ. ಏಕೆಂದರೆ ಅವರಿಗೆ ಏನು ಬೇಕೋ ಅದು ಪೋಷಕರು ಕೊಡಬೇಕಾಗಿದೆ. ಷರೀಫರನ್ನು ಸ್ವೀಕಾರ ಮಾಡಿದ ಗುರುಗೋವಿಂದರು ಸರಿಯಾದ ಫಲವನ್ನು ಸಮಾಜಕ್ಕೆ ನೀಡಿದರು ಎಂದರು.

ಷರೀಫ್‌ರ ಗುರು ನಿಷ್ಠೆಯು ಬಗ್ಗೆ ತಿಳಿಸುತ್ತಾ, ಒಮ್ಮೆ ಶಿಷ್ಯರೊಂದಿಗೆ ಸಾಗುವಾಗ ಕಲ್ಲು ಮುಳ್ಳಿನ ಹಾದಿ ಎದುರಾಗುತ್ತದೆ. ಆಗ ಗುರುಗಳು ತಮ್ಮ ಹಾವುಗೆ(ಪಾದರಕ್ಷೆ)ಗಳನ್ನು ಎಸೆದು ಒಬ್ಬಬ್ಬರೇ ಇದನ್ನು ಮೆಟ್ಟಿಕೊಂಡು ಬನ್ನಿ ಎಂದಾಗ, ಷರೀಫ ಯಾವುದೇ ಅಳುಕು ಇಲ್ಲದೇ ಅವರ ಹಾವುಗೆ ಮೆಟ್ಟಿ ಸಾಗುತ್ತಾನೆ. ಬೇರೆಯ ಶಿಷ್ಯರು ಅದನ್ನು ಒಪ್ಪುವುದಿಲ್ಲ. ಗುರುಗಳೇ ಹೇಳಿದ ಮೇಲೆ ಇನ್ನೇನು ಎನ್ನುವುದು ಷರೀಫನ ವಾದ. ಇದು ಅವನ ಗುರುಭಕ್ತಿಗೆ ದ್ಯೋತಕವಾಗಿದೆ. ಇನ್ನೊಮ್ಮೆ ಗುರುಗಳು ದಾರಿಯಲ್ಲಿ ಬರುವಾಗ ಬಂಗಾರದ ಖಡ್ಗ ಕಾಣಿಸುತ್ತದೆ. ನಮ್ಮ ಶಿಷ್ಯ ಷರೀಫನಿಗೆ ಅದು ಕಂಡು ಮನಸು ಚಂಚಲವಾಗಬಾರದು ಎಂದುಕೊಂಡು ಅದಕ್ಕೆ ಮಣ್ಣು ಮುಚ್ಚಿ ಅವನನ್ನು ಬೇರೆಡೆಗೆ ಏನೋ ವಸ್ತು ತರಲು ಕಳುಹಿಸುತ್ತಾರೆ. ಆದರೆ ಷರೀಫ ಬಂದವನೇ ಅಲ್ಲಿ ವಾಂತಿ ಮಾಡುತ್ತಾನೆ. ಏಕೆಂದರೆ ಬೇರೆ ಶಿಷ್ಯರೂ ಅದಕ್ಕೆ ಆಸೆ ಪಡಬಾರದೆಂದು. ಹೀಗೆ ಗುರು ಶಿಷ್ಯರ ಚಿಂತನೆಗಳು ಒಮ್ಮುಖವಾಗಿ ಸಾಗುತ್ತದೆ.

ಮೊದಲು ಷರೀಫ, ಮೇಷ್ಟ್ರ ಕೆಲಸ, ಲೆಕ್ಕ ಬರೆಯುವ ಕೆಲಸ ಮಾಡುತ್ತಾರೆ. ಆದರೆ ಅದಾವುದು ಅವರಿಗೆ ತೃಪ್ತಿ ತಂದಿರುವುದಿಲ್ಲ. ತನಗೆ ಬೇರೆಯೇ ಕೆಲಸವಿದೆ ಎನ್ನುತ್ತಾ ಆಧ್ಯಾತ್ಮ ಚಿಂತನೆಯ ಹಾದಿ ತುಳಿಯುತ್ತಾರೆ. ಸಮಾಜದವರು ಬ್ರಾಹ್ಮಣ ಗುರುಗಳಿಗೆ ಸಾಬರು ಶಿಷ್ಯ ಎಂದಾಗ ಅವನಿಗೆ ಜನಿವಾರ ಹಾಕಿ, ಶಾಸ್ತ್ರವನ್ನು ಬೋಧಿಸುತ್ತಾರೆ. ಅದನ್ನು ಷರೀಫರು "ಹಾಕಿದ ಜನಿವಾರವ ಸದ್ಗುರುನಾಥ ಹಾಕಿದ ಜನಿವಾರವ. ಹಾಕಿದ ಜನಿವಾರ ನೂಕಿದ ಭವಭಾರ. ಲೋಕದಿ ಬ್ರಹ್ಮಜ್ಞಾನ ನೀ ಪಡೆಯೆಂದು– ಹಾಕಿದ ಜನಿವಾರವ" ಎಂಬ ಹಾಡನ್ನು ರಚಿಸಿದ್ದಾರೆ. 'ದೇವರ ಬಗ್ಗೆ ತಿಳಿದುಕೋ' ಎಂದು ಗುರುಗಳು ಹೇಳಿದಾಗ 'ಧನ್ಯನಾದೆ' ಎಂದು ಅವರ ಮಾತನ್ನು ಸ್ವೀಕಾರ ಮಾಡಿದ್ದಾನೆ. ತಮ್ಮ ಅನುಭವದ ಜೊತೆ ಈ ಹಾಡನ್ನು ಬಹಳ ಅರ್ಥಪೂರ್ಣವಾಗಿ ಬರೆದಿದ್ದಾರೆ.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**






ಇವರ ರಚನೆಗಳನ್ನು ಸಂಶೋಧಿಸಿ ಕೊಟ್ಟವರು ಕವಿ ಲಕ್ಷ್ಮೀನಾರಾಯಣ ಭಟ್ಟರು. ಅವರು ಶಿವಮೊಗ್ಗದ ದೊಡ್ಡ ಬ್ರಾಹ್ಮಣರ ಕೇರಿಯಲ್ಲಿದ್ದವರು. ಅಲ್ಲಿನ ಲಕ್ಷ್ಮೀನಾರಾಯಣ ದೇವಸ್ಥಾನದ ಎದುರೇ ಅವರ ಮನೆ. ಅವರು ದಾಸರ ಹಾಡುಗಳನ್ನು, ಷರೀಫರ ಹಾಡುಗಳನ್ನು ಬೆಳಕಿಗೆ ತಂದವರು. ಪ್ರೊ ಲಕ್ಷ್ಮೀನಾರಾಯಣ ಭಟ್ಟರ ಪ್ರಯತ್ನವಿಲ್ಲದೇ ಹೋಗಿದ್ದರೆ, ಸಂಶೋಧನೆ ಇಲ್ಲದಿದ್ದರೆ, ಅವರು ಈ ಲೋಕಕ್ಕೆ ಬೆಳಕಿಗೆ ತಂದಿಲ್ಲದಿದ್ದರೆ ಇದು ಮುಂಚೂಣಿಗೇ ಬರುತ್ತಿರಲಿಲ್ಲ. ಪುರಂದರದಾಸರ, ಕನಕದಾಸರ ಮುಂದಿನ ದಾರಿ ಷರೀಫರದು. ಷರೀಫರು ಲೋಕವನ್ನು ತಿದ್ದಬೇಕೆಂದು ಪ್ರಯತ್ನ ಪಡುತ್ತಾರೆ. ಅವರ ಹಾಡುಗಳೆಲ್ಲವನ್ನು ಒಗಟಿನ ರೂಪದಲ್ಲಿ ಕೊಟ್ಟಿದ್ದಾರೆ. ಒಂದೊಂದು ಸಾಲಿನಲ್ಲಿ ಗೂಢವಾದ, ಸರಳವಾದ, ಗಹನವಾದ ಅರ್ಥವಿದೆ, ವಿಷಯವಿದೆ. ಸಮಾಜದ ಸರ್ವರಿಗೂ ತಮ್ಮ ಹಾಡುಗಳನ್ನು ಮನದಟ್ಟು ಮಾಡಿಸಿದ್ದಾರೆ. ಮಾತಿನಲ್ಲಿ ಕೊರತೆ ಇರುವವರು ಮಾತ್ರ ಬಡಿದಾಡುತ್ತಾರೆ. ಷರೀಫರು 210 ವರ್ಷಗಳ ಹಿಂದೆ ಹೇಳಿದ ಮಾತು ಇಂದಿಗೂ ಪ್ರಸ್ತುತವಿದೆ. ಅವರು ರೊಕ್ಕದ ಬಗ್ಗೆ ಹೇಳಿದ ಮಾತು– 'ದುಡ್ಡು ಕೆಟ್ಟದ್ದು ನೋಡಣ್ಣ. ದುಗ್ಗಾಣಿಗೆ ಹೆಡ್ಡನಾಗಬೇಡೋ ನೀನಣ್ಣ. ಮುಕ್ಕಿಸಿತೋ ಮಣ್ಣು. ಬೇಡುತಿರಲು ಮಾನ ಮರ್ಯಾದೆ ಬೇಕು' ಎಂದು ಹಲವಾರು ಸೂಕ್ಷ್ಮ ವಿಷಯಗಳನ್ನು ತಮ್ಮ ಈ ರಚನೆಯಲ್ಲಿ ಹೇಳಿದ್ದಾರೆ.

ತಮ್ಮ ಗುರುವಿನ ಬಗ್ಗೆ ಇರುವ ಭಕ್ತಿಯ ಬಗ್ಗೆ ಹೇಳುತ್ತಾ, 'ಕೋಡಗನ ಕೋಳಿ ನುಂಗಿತ್ತಾ ನೋಡವ್ವಾ ತಂಗಿ' ಎಂಬ ಹಾಡಿನ ಕೊನೆಯಲ್ಲಿ 'ಗೋವಿಂದ ಗುರುವಿನ ಪಾದ ನನ್ನನೆ ನುಂಗಿತ್ತಾ' ಎಂದು ಹಾಡನ್ನು ಮುಕ್ತಾಯಗೊಳಿಸಿದ್ದಾರೆ. ಇದು ಅವರ ಗುರು ಭಕ್ತಿಯ ಪರಾಕಾಷ್ಠೆಯನ್ನು ತೋರಿಸುತ್ತದೆ ಎಂದರು. ಈ ಹಾಡನ್ನು ಮುಖ್ಯ ಅತಿಥಿಗಳು ಸಭೆಯಲ್ಲಿ ಸುಶ್ರಾವ್ಯವಾಗಿ ಹಾಡಿದರು.

ನಮ್ಮ ಮನಸ್ಸಿನ ಶುದ್ಧತೆ ಬಗ್ಗೆ ಅವರು ಬರೆದ ಪದ್ಯ ಕುರಿಗಳೋ ನಾವು ಕುರಿಗಳೋ ಏನು ಬಲ್ಲೆವಳಗಾನ ಕಾರುಬಾರು. ಅಂದರೆ ನಮ್ಮ ಮನಸ್ಸಿನ ಕಾರುಬಾರು ಏನು ಎಂಬುದಾಗಿರುತ್ತದೆ. ಈ ಪದ್ಯವನ್ನೂ ಸಹ ಹಾಡಿದರು. ಜೀವನ ಒಂದು ಕುರಿಯದೊಡ್ಡಿ. ಹಾಲಿನ ಗಡಿಗಿ, ನಿಮ್ಮಲ್ಲಿರಬೇಕು ಅರಿವಿನ ಬಡಿಗಿ, ಎಲ್ಲವುದು ನಿಮ್ಮಕೈಯ್ಯಲ್ಲಿದೆ. ಕುರಿಗಳು ಯಾವಾಗಲೂ ಪಿಕ್ಕೆಯನ್ನು ಹಾಕುವಂತೆ ನಮ್ಮ ಮನಸ್ಸು ಕೂಡ ರಾಡಿ ಮಾಡಿಕೊಂಡಿರುತ್ತೆ. ಅದನ್ನು ಸದಾ ಗುಡಿಸುತ್ತಾ ಇರಬೇಕು ಎಂಬ ಆ ಹಾಡಿನ ಅರ್ಥವನ್ನು ವಿವರವಾಗಿ ಪ್ರಸ್ತುತ ಪಡಿಸಿದರು. ಕೊನೆಯಲ್ಲಿ ಪ್ರೊ.ಲಕ್ಷ್ಮೀನಾರಾಯಣ ಭಟ್ಟರು, ಷರೀಫರ ಬಗ್ಗೆ ರಚಿಸಿದ ಪದ್ಯವೊಂದನ್ನು ಓದಿ ತಮ್ಮ ಮಾತನ್ನು ಮುಗಿಸಿದರು. ಆ ಪದ್ಯ ಇಂತಿದೆ:

**ಷರೀಫಜ್ಜನಿಗೆ**
**ಒಂದು ಧರ್ಮಕೆ ಮೊಳೆತು ಇನ್ನೊಂದರಲಿ ಫಲಿತು**
**ಸಾರ ಒಂದೇ ಎಂದು ಹಾಡಿದಾತ**
**ಹನಿ ಸೇರಿ ಹೊಳೆಯಾಗಿ ಗುರಿ ಸೇರಿ ಕಡಲಾಗಿ**
**ನಭವೇರಿ ಮುಗಿಲಾಗಿ ಆಡಿದಾತ,**
**ಹತ್ತು ವನಗಳ ಸುತ್ತಿ, ಹೂ ಹೂವನು ಮುತ್ತಿ**
**ಒಂದೇ ಜೇನಿಗೆ ಹುಟ್ಟುಕಟ್ಟಿದಾತ.**
**ಎಲ್ಲಿ ಹೇಳೋ ತಾತ, ಹಿಂದೆಯಾ ಅವಧೂತ**
**ಸಾಧಿಸಿದೆ ನಿನ್ನಂತೆ ಧರ್ಮವನ್ನು,**
**ಕಾವ್ಯದಲಿ ಕಡೆದ ಆ ಮರ್ಮವನ್ನು?**
**ಸೃಷ್ಟಿ ಮರೆಸಿಟ್ಟಿರುವ ಗುಟ್ಟುಗಳನು**
**ಸಪ್ತಸ್ವರ ಮೀರಿದ ಮಟ್ಟುಗಳನು**
**ನಿನ್ನ ನುಡಿಯಲಿಟ್ಟೆ ಮಾತಿಗರ್ಥವ ಕೊಟ್ಟೆ**
**ಹಾಡು ಮಾಡಿದೆ ನಿನ್ನ ವ್ಯಥೆಗಳನ್ನು**
**ಹೇಳು ಹೇಳು ಷರೀಫ ಹಿಂದೆ ಯಾವ ಖಲೀಫ**
**ಏರಿದ್ದ ಈ ಹೊನ್ನಿನಟ್ಟವನ್ನು,**
**ಮಣಿಸಿದ ಮಾತುಗಳ ಬೆಟ್ಟವನ್ನು?.**
**ಏನು ಜೀವನಧರ್ಮ, ಏನು ಸೃಷ್ಟಿಯ ಮರ್ಮ,**
**ಏನು, ಎಲ್ಲಿ, ಯಾಕೆ ತಾಕಿದವನು,**
**ಬೆಟ್ಟ ಬೆಟ್ಟವ ಕುಲುಕಿ, ಸಪ್ತ ಸಾಗರ ಕಲಕಿ**
**ಸೃಷ್ಟಿ ಮೂಲವ ಹುಡುಕಿ ಜೀಕಿದವನು.**
**ಹೇಳು ಹೇಳು ಷರೀಫ ಬೇರೊಬ್ಬ ಯಾರವನು**
**ನಿನ್ನಂತೆ ನಡೆ ನುಡಿಯ ಕಾಡಿದವನು**
**ತೀರದಾಚೆಯ ತಾರೆ ಕೂಡಿದವನು?**
**ಅನ್ನ ನೆಲ ಮಾತು ಮತ ಎಲ್ಲ ಬೇರಾದರೂ**
**ಪ್ರೀತಿಯಲಿ ಅವನ್ನೆಲ್ಲಾ ಕಲಿಸಿಬಿಟ್ಟೆ**
**ಬಣ್ಣ ಏಳಾದರೂ ಒಂದೇ ಕಾಮನಬಿಲ್ಲು**
**ಚಂದವಾದಂತೆ ನೀ ಬಾಳಿಬಿಟ್ಟೆ**
**ಗಡಿ ಮೀರಿ, ಮಡಿ ಮೀರಿ, ಬಾನಿನಲಿ ಕುಡಿಯೂರಿ**
**ಗಾಳಿಯಲಿ ಬಾಳಪಟ ತೇಲಿ ಬಿಟ್ಟೆ!**
**ಹೇಳು ಹೇಳು ಷರೀಫ, ಯಾವ ಭಾವ ಕಲಾಪ**
**ಇಂಥ ಬಿಡುಗಡೆ ಕೊಟ್ಟ ಸೂತ್ರವಾಯ್ತು – ಹೇಗೆ**
**ಬರಿ ನೀರು ಪರಿಶುದ್ಧ ತೀರ್ಥವಾಯ್ತು?**

ಹೀಗೆ ಷರೀಫರ ಬಗ್ಗೆ ಭಾವಪೂರ್ಣವಾಗಿ ಮಾತನಾಡಿದ ಶ್ರೀ ಮಲ್ಲಿಕಾರ್ಜುನ ತುರುವನೂರುರವರು ರೊ.ಎನ್.ವಿ.ಭಟ್ಟರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿ ತಮ್ಮ ಮಾತನ್ನು ಮುಗಿಸಿದರು.

ಅಧ್ಯಕ್ಷರಾದ ರೊ. ಆನಂದರವರು ತಮ್ಮ ಅಧ್ಯಕ್ಷೀಯ ನುಡಿಯನ್ನಾಡುತ್ತಾ ಇಂದು ಮುಖ್ಯ ಅತಿಥಿಗಳು ಬಹಳ ಸೊಗಸಾಗಿ ವಿಷಯದ ಬಗ್ಗೆ ಮಾತನಾಡಿದ್ದಾರೆ ಎಂದು ತಿಳಿಸಿ, 'ನೆನೆಯೋ ಗೋವಿಂದನ ಪಾದವ' ಎಂಬ ಹಾಡನ್ನು ಹಾಡಿ ಮುಖ್ಯ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಸರ್ವರನ್ನು ವಂದಿಸಿದರು.



## ಸಂಪಾದಕೀಯ

### ಪ್ರಾಮಾಣಿಕತೆಯೇ ದೊಡ್ಡ ಬಹುಮಾನ

ಒಮ್ಮೆ ಒಬ್ಬ ವ್ಯಕ್ತಿ ಹಣವನ್ನು ತೆಗೆಯಲು ಬ್ಯಾಂಕಿಗೆ ಹೋದನು. ಕ್ಯಾಷಿಯರ್ ಹಣವನ್ನು ನೀಡಿದ ತಕ್ಷಣ, ಗ್ರಾಹಕನು ಅದನ್ನು ಸುಮ್ಮನೆ ತನ್ನ ಚೀಲದಲ್ಲಿ ಇಟ್ಟುಕೊಂಡು ಅಲ್ಲಿಂದ ಹೊರಟನು. ಅವನು ಒಂದು ಲಕ್ಷದ ನಲವತ್ತು ಸಾವಿರ ರೂಪಾಯಿಗಳನ್ನು ಡ್ರಾ ಮಾಡಿದ್ದನು. ಆದರೆ, ಕ್ಯಾಷಿಯರ್ ತಪ್ಪಾಗಿ ಒಂದು ಲಕ್ಷದ ನಲವತ್ತು ಸಾವಿರದ ಬದಲಿಗೆ ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳನ್ನು ನೀಡಿದ್ದಾನೆ ಎಂಬುದು ಅವನಿಗೆ ತಿಳಿದಿತ್ತು. ಆದರೆ, ತಾನು ಹಣವನ್ನು ಎಣಿಸಿಯೇ ಇಲ್ಲ, ಕ್ಯಾಷಿಯರ್ ಮೇಲೆ ತನಗೆ ಸಂಪೂರ್ಣ ನಂಬಿಕೆಯಿದೆ ಎಂಬಂತೆ ನಟಿಸುತ್ತಾ, ಸುಮ್ಮನೆ ಹಣವನ್ನು ಇಟ್ಟುಕೊಂಡನು.

ಆದರೆ, ಚೀಲದಲ್ಲಿ ಹಣ ಇಟ್ಟ ತಕ್ಷಣ ಆ ಹೆಚ್ಚುವರಿ 20,000 ರೂಪಾಯಿಗಳ ಬಗ್ಗೆ ಅವನ ಮನಸ್ಸಿನಲ್ಲಿ ತಳಮಳ ಶುರುವಾಯಿತು. 'ಹೆಚ್ಚುವರಿ ಹಣವನ್ನು ಹಿಂತಿರುಗಿಸು' ಎಂದು ಅವನ ಮನಸ್ಸು ಹೇಳಿತು. ಆದರೆ ಮರುಕ್ಷಣವೇ, 'ನಾನು ಯಾರಿಗಾದರೂ ತಪ್ಪಾಗಿ ಹೆಚ್ಚು ಹಣ ಕೊಟ್ಟಿದ್ದರೆ ಅವರೇನು ವಾಪಸ್ ಕೊಡುತ್ತಿದ್ದರೆ?' ಎಂದು ಯೋಚಿಸಿದನು. ಹಣವನ್ನು ಹಿಂತಿರುಗಿಸಬೇಕೆಂದು ಮನಸ್ಸು ಪದೇ ಪದೇ ಹೇಳುತ್ತಿತ್ತು. ಆದರೆ, ಬುದ್ಧಿ ಮಾತ್ರ ಹಣವನ್ನು ಇಟ್ಟುಕೊಳ್ಳಲು ಒಂದಲ್ಲ ಒಂದು ನೆಪ ಅಥವಾ ಕಾರಣವನ್ನು ಹುಡುಕುತ್ತಿತ್ತು.

ಆದರೆ, ಮನುಷ್ಯನೊಳಗೆ ಬುದ್ಧಿ ಮಾತ್ರ ಇರುವುದಿಲ್ಲವಲ್ಲ. ಹೃದಯ ಮತ್ತು ಅಂತರಾತ್ಮಕೂಡ ಇರುತ್ತದೆ. 'ಇದೇನಾ ನಿನ್ನ ಪ್ರಾಮಾಣಿಕತೆ' ಎಂದು ಅಂತರಾತ್ಮ ಅವನನ್ನು ಚುಚ್ಚುತ್ತಿತ್ತು.

ಅವನ ಆತಂಕ ಹೆಚ್ಚಾಗುತ್ತಾ ನೆಮ್ಮದಿಯೇ ಇಲ್ಲವಾಯ್ತು. ಅವನು ಚೀಲದಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ತೆಗೆದು ಜೇಬಿಗೆ ಹಾಕಿಕೊಂಡು ಬ್ಯಾಂಕಿನ ಕಡೆಗೆ ನಡೆದನು. ಈಗ ಅವನ ಆತಂಕ ಮತ್ತು ಒತ್ತಡ ಕಡಿಮೆಯಾಗತೊಡಗಿತು. ಅವನು ಹಗುರಾದ; ಆರೋಗ್ಯವಾಗಿರುವಂಥ ಅನುಭವ. ಯಾವುದೋ ಕಾಯಿಲೆಯಿಂದ ಮುಕ್ತಿ ಸಿಕ್ಕಂಥ ಅನುಭವವಾಯ್ತು. ಯಾವುದೋ ಯುದ್ಧವನ್ನು ಗೆದ್ದಂಥ ಸಂತೋಷ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಹಣವನ್ನು ಕಂಡು ಕ್ಯಾಷಿಯರ್ ನೆಮ್ಮದಿಯ ನಿಟ್ಟುಸಿರು ಬಿಟ್ಟನು. ಅವನು ತನ್ನ ಜೇಬಿನಿಂದ ಒಂದು ಸಾವಿರ ರೂಪಾಯಿಯ ನೋಟನ್ನು ತೆಗೆದು ಗ್ರಾಹಕನಿಗೆ ನೀಡುತ್ತಾ, 'ಅಣ್ಣ, ನಿಮಗೆ ತುಂಬಾ ಧನ್ಯವಾದಗಳು. ಇವತ್ತು ನನ್ನ ಕಡೆಯಿಂದ ಮಕ್ಕಳಿಗೆ ಸಿಹಿ ತೆಗೆದುಕೊಂಡು ಹೋಗಿ, ದಯವಿಟ್ಟು ಬೇಡ ಅನ್ನಬೇಡಿ' ಎಂದನು.

'ಅಣ್ಣ, ನಾನು ನಿಮಗೆ ಧನ್ಯವಾದ ಹೇಳಬೇಕು ಮತ್ತು ಇವತ್ತು ಸಿಹಿಯನ್ನು ನಾನೇ ನಿಮ್ಮೆಲ್ಲರಿಗೂ ತಿನ್ನಿಸುತ್ತೇನೆ' ಎಂದು ಗ್ರಾಹಕ ಹೇಳಿದನು. ಕ್ಯಾಷಿಯರ್ ಆಶ್ಚರ್ಯದಿಂದ ಕೇಳಿದನು; 'ನೀವು ಯಾವುದಕ್ಕಾಗಿ ಧನ್ಯವಾದ ಹೇಳುತ್ತಿದ್ದೀರಿ ಮತ್ತು ಯಾವ ಸಂತೋಷಕ್ಕಾಗಿ ಸಿಹಿ ಹಂಚುತ್ತೀರಿ'?

ಗ್ರಾಹಕ ಹೇಳಿದ, 'ಈ ಇಪ್ಪತ್ತು ಸಾವಿರ ರೂಪಾಯಿಗಳು ನನಗೆ ಆತ್ಮಾವಲೋಕನ ಮಾಡಿಕೊಳ್ಳುವ ಅವಕಾಶ ನೀಡಿದ್ದಕ್ಕಾಗಿ ನಾನು ನಿಮಗೆ ಆಭಾರಿಯಾಗಿದ್ದೇನೆ. ನೀವು ಈ ತಪ್ಪು ಮಾಡದಿದ್ದರೆ ನಾನು ಈ ದ್ವಂದ್ವಕ್ಕೆ ಸಿಲುಕುತ್ತಿರಲಿಲ್ಲ ಮತ್ತು ನನ್ನ ಲೋಭವನ್ನು ಜಯಿಸಲು ಸಾಧ್ಯವಾಗುತ್ತಿರಲಿಲ್ಲ. ಇದು ತುಂಬಾ ಕಷ್ಟದ ಕೆಲಸವಾಗಿತ್ತು. ಗಂಟೆಗಳ ಕಾಲ ನಡೆದ ಮಾನಸಿಕ ಹೋರಾಟದ ನಂತರ ನಾನು ಗೆದ್ದಿದ್ದೇನೆ. ಈ ಅಪರೂಪದ ಅವಕಾಶಕ್ಕಾಗಿ ನಿಮಗೆ ಧನ್ಯವಾದಗಳು ಎಂದನು.

ಹೌದು, ಅನಾಯಾಸವಾಗಿ ಬಂದಿದ್ದು ನೆಮ್ಮದಿಯನ್ನು ಕೊಡುವುದಿಲ್ಲ. ನಾವು ಕಷ್ಟಪಟ್ಟು ದುಡಿದದ್ದು ಅಥವಾ ನಮ್ಮ ಪಾಲಿನದ್ದು ಮಾತ್ರ ನಮಗೆ ಸಂತೋಷವನ್ನು ನೀಡಬಲ್ಲದು ಅಲ್ಲವೇ?

• ರೊ. ಎಂ. ಮಾಧವಾಚಾರ್




**ಜನ್ಮ ದಿನದ ಶುಭಾಶಯಗಳು**









*Govindaraju B K*
*13th April*



**ಮುದ್ದುರಾಮನ ಚೌಪದಿ...**

ಕಡಲಾಳದಲಿ ಬಿದ್ದ ಮುತ್ತುಮಣಿಗಳದೆಷ್ಟೋ
ಗೋಚರಕೆ ಬಾರದಿಹ ವನಸುಮಗಳೆಷ್ಟೋ
ಸದ್ದಿರದೆ ಬೆಳಕೀವ ಹಣತೆಸಾಲುಗಳೆಷ್ಟೋ
ತುಟಿ ತೆರೆಯದಿಹುದೆಷ್ಟೋ – ಮುದ್ದುರಾಮ




To,

*Book Post*